ಮೊನ್ನೆ ಮೊನ್ನೆಯವರೆಗೂ ಇವೆಲ್ಲಾ ಪಾಶ್ಚಾತ್ಯ ದೇಶಗಳಲ್ಲಿ ಮಾತ್ರ ಸಾಧ್ಯ ಅನ್ನಿಸಿದ್ದ ಬದಲಾವಣೆಗಳು ಭಾರತಕ್ಕೂ ಬಂದಿಳಿದಿವೆ. ತಂತ್ರಜ್ಞಾನದ ಬಳಕೆ ಇರಬಹುದು, ಚುನಾವಣೆಯಲ್ಲಿ ಸಾಮಾಜಿಕ ಜಾಲತಾಣದ ಉಪಯೋಗ, ಶಿಕ್ಷಣ ವ್ಯವಸ್ಥೆ, ಆ್ಯಪ್ ಆಧರಿಸಿದ ಸೇವೆಗಳು ಅಥವಾ ಇ–ಕಾಮರ್ಸ್ ಇರಬಹುದು, ಏರ್ ಆಂಬುಲೆನ್ಸ್ ಅಥವಾ ಏರ್ ಟ್ಯಾಕ್ಸಿ ಆದರೂ ಸರಿಯೇ – ಇವೆಲ್ಲ ಭಾರತಕ್ಕೆ ಬರಲು ಇನ್ನೂ ಸಾಕಷ್ಟು ಸಮಯ ಬೇಕು ಅಂತ ಅಂದುಕೊಳ್ಳುವಾಗಲೇ ಇವೆಲ್ಲಾ ಇಲ್ಲಿಗೆ ಬಂದೂ ಆಯ್ತು, ನಮ್ಮ ಜೀವನವನ್ನು ಆಮೂಲಾಗ್ರವಾಗಿ ಬದಲಾಯಿಸಿಯೂ ಆಯ್ತು.

ನಿನ್ನೆ ಮೊನ್ನೆ ಭಾರತದಲ್ಲಿ ಸಾಮಾಜಿಕ ಜಾಲತಾಣ ಉಪಯೋಗಿಸುವ ಒಂದು ಪುಟ್ಟ ಸಮುದಾಯದಲ್ಲಿ ಒಂದು ಧೂಮಕೇತು ಗೋಚರಿಸಿದೆ. ಅಮೆರಿಕದಲ್ಲಿ ಶುರುವಾದ **#MeToo** 'ಮಿ– ಟೂ' ಎಂಬ ಅರೆ ಪದಗಳು ಶಕ್ತ ಅಸ್ತ್ರಗಳಾಗಿ, ಅಲೆಯಾಗಿ ಸಾಕಷ್ಟು ಜನರನ್ನು ಆಹುತಿ ತೆಗೆದುಕೊಂಡಿದೆ. ಶುರುವಾದ ಕೆಲವೇ ಕೆಲವು ದಿನಗಳಲ್ಲಿ ದೊಡ್ಡ ಕನಸುಗಳನ್ನು ಹೊತ್ತ ಮನರಂಜನೆಯ ಕಂಪನಿಯೊಂದು ಚೆಲ್ಲಾಪಿಲ್ಲಿಯಾಯಿತು. ಅದರಲ್ಲಿದ್ದ ವಿಕಾಸ್ ಬಹ್ಲ್ ಎನ್ನುವ ಖ್ಯಾತ ನಿರ್ದೇಶಕ (ಕಂಗನಾ ರನೋವತ್ ಅಭಿನಯದ 'ಕ್ವೀನ್' ಸಿನಿಮಾದ ನಿರ್ದೇಶಕ) ತನ್ನ ಸಹೋದ್ಯೋಗಿಯೊಬ್ಬಳ ಮೇಲೆ ವರ್ಷಗಳ ಹಿಂದೆ ಮಾಡಿದ ಅತ್ಯಾಚಾರದ ವಿವರ ಇಂಚಿಂಚಾಗಿ ಬಯಲುಗೊಂಡು, ಅದಕ್ಕೆ ಪುರಾವೆ ದೊರೆತಿದೆ.

ಅದಕ್ಕೂ ಮುಂಚೆ ತನುಶ್ರೀ ದತ್ತಾ ಎನ್ನುವ ಬಾಲಿವುಡ್ ಅಭಿನೇತ್ರಿ ನಾನಾ ಪಾಟೇಕರ್ ತನ್ನ ಜೊತೆ ಅನುಚಿತವಾಗಿ ವರ್ತಿಸಿದ್ದನ್ನು, ಆ ಘಟನೆಗೆ ಚಿತ್ರದ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಇಂಬು ಕೊಟ್ಟಿದ್ದನ್ನ ಹೇಳಿಕೊಂಡಿದ್ದರು. ಹತ್ತು ವರ್ಷಗಳ ಹಿಂದೆ ನಡೆದ ಈ ಘಟನೆಯನ್ನು ಸಾಕ್ಷೀಕರಿಸಿ ಹಲವರು ತನುಶ್ರೀ ಅವರ ಬೆಂಬಲಕ್ಕೆ ಬಂದರು. ಅಲ್ಲಿ ನಡೆದ ಗಲಾಟೆಯ ವಿಡಿಯೋ ಮತ್ತು ವರದಿಗಳನ್ನು ನೀಡಿದರು. ನಾನಾ ಪಾಟೇಕರ್ ಮೌನವಾಗಿದ್ದರೂ ನಂತರ ಮಾತನಾಡಿ 'ಆ ಘಟನೆಯ ತನಿಖೆ ಆಗಲಿ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯೆಯಾಗಿ ಹೊಮ್ಮುತ್ತಿದ್ದ ಅಭಿಪ್ರಾಯಗಳು 'ಕಟ್ಟೆ ಮಾತಿನ' ಶೈಲಿಯಲ್ಲಿದ್ದವು. ನಾನಾ ಅವರ ವರ್ತನೆಯನ್ನು ಬಹುತೇಕರು ಬೆಂಬಲಿಸಿದರೆ, ಇನ್ನು ಕೆಲವರು ತನುಶ್ರೀ ಅವರದ್ದು 'ಧಾರ್ಷ್ಟ್ಯ' ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಮತ್ತೂ ಕೆಲವರು ಹತ್ತು ವರ್ಷಗಳ ಹಿಂದಿನ ನೋವನ್ನು ಈಗಾದರೂ ಹೊರಹಾಕಿದ್ದಕ್ಕೆ ತನುಶ್ರೀಗೆ ಅಭಿನಂದನೆ ಸಲ್ಲಿಸಿದರು.

ನಂತರ ಅನಿರೀಕ್ಷಿತವಾದ ವಿಷಯವೊಂದು ಹೊರ ಬಂತು. ಅದು, ಮಾಧ್ಯಮ ಮನೆಗಳಲ್ಲಿ ನಡೆಯುತ್ತಿರುವ ದೌರ್ಜನ್ಯಗಳ ಕುರಿತ ಪ್ರಸ್ತಾಪ. ಈಗ್ಗೆ ಒಂದೆರಡು ದಶಕಗಳಿಂದ ಇಂಗ್ಲಿಷ್ ಸುದ್ದಿಮನೆಗಳಲ್ಲಿ, ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಹೆಣ್ಣುಮಕ್ಕಳು ಕೆಲಸದ ಜಾಗದಲ್ಲಿ ತಾವು ಅನುಭವಿಸಿದ ಲೈಂಗಿಕ ಕಿರುಕುಳದ ಬಗ್ಗೆ ಹೇಳಿಕೊಂಡರು.

'ಅವರಿಗೆ ಕಿರುಕುಳ ಕೊಟ್ಟವರೇ ತಮ್ಮನ್ನೂ ಲೈಂಗಿಕ ವಸ್ತುವಿನಂತೆ ನೋಡಿದರು, ಅದಕ್ಕೆ ಸಹಕರಿಸದಿದ್ದಾಗ ತಮಗೆ ಕೆಲಸ ಮಾಡಲು ಆಗದಿರುವಂಥ ಸನ್ನಿವೇಶಗಳನ್ನು ಸೃಷ್ಟಿ ಮಾಡಿದರು' ಎನ್ನುವ ವಿಚಾರಗಳನ್ನು ಕೆಲವರು ಹಂಚಿಕೊಂಡರು. ಎಲ್ಲವೂ ಆಯಾಚಿತವಾಗಿ ನಡೆಯಿತು. ಒಂದೊಂದಾಗಿ ವಿಚಾರ ಹೊರಗೆ ಬರುತ್ತಿದ್ದಂತೆ ಹಳೇ ಬಾಸುಗಳಿಗೆ ನಡುಕ ಹುಟ್ಟಿಕೊಂಡಿತು. ಪುರಾವೆ ಸಮೇತ ಕಿರುಕುಳವನ್ನು ಹಂಚಿಕೊಂಡ ಸುದ್ದಿಗಳನ್ನಾಧರಿಸಿ ಕೆಲವರನ್ನು ಕೆಲಸದಿಂದ ತೆಗೆದುಹಾಕಿದರೆ, ಇನ್ನು ಕೆಲವರನ್ನು ರಜೆಯ ಮೇಲೆ ಕಳಿಸಲಾಯಿತು.

ದೊಡ್ಡ ದೊಡ್ಡ ಹೆಸರುಗಳು ಹೊರಬಂದಂತೆ ಅವರ ದೊಡ್ಡ ಹುದ್ದೆಗಳ ಘನತೆ ಕಡಿಮೆಯಾಗಿ ಕೆಲವರು ಕೆಲಸ ಬಿಟ್ಟು ಹೊರನಡೆಯಲೇಬೇಕಾಗಿ ಬಂತು. ಭೂತದ ಚಟಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದ ಕಾರಣ ಭವಿಷ್ಯಕ್ಕೆ ಮಾರಕವಾಯಿತು.



ಪತ್ರಕರ್ತೆಯರೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪಕ್ಕೆ ಗುರಿಯಾಗಿರುವ ಕೇಂದ್ರ ಸಚಿವ ಎಂ.ಜೆ. ಅಕ್ಬರ್

## ದೊಡ್ಡವರ ಸಣ್ಣತನಗಳು

ಚಿಕ್ಕಪುಟ್ಟ ಹುದ್ದೆಗಳಲ್ಲಿ ಇದ್ದವರಿಂದ ಶುರುವಾಗಿ ಸಂಪಾದಕರವರೆಗೂ ಹಬ್ಬಿದ ಈ ಸುದ್ದಿಗಳು ನಂತರ ಸ್ಟಾರುಗಳು, ಸಂಗೀತಗಾರರು, ನೃತ್ಯಪಟುಗಳು, ಸಂಸ್ಥೆಗಳ ಮುಖ್ಯಸ್ಥರು, ಬರಹಗಾರರು, ಮತ್ತು ಅತಿ ದೊಡ್ಡ ಬಲಿ ಎನ್ನಿಸಿಕೊಳ್ಳಬಲ್ಲ – ಈ ಮುನ್ನ ಮಾಧ್ಯಮದ ನಕ್ಷತ್ರ ಎನ್ನಿಸಿಕೊಂಡಿದ್ದ ಹಾಗೂ ಈಗ ಕೇಂದ್ರ ಮಂತ್ರಿ ಆಗಿರುವ ಎಂ.ಜೆ. ಅಕ್ಬರ್ ಅವರ ಮೇಲೆ ಬಂದು ನಿಂತಿದೆ. ಎಲ್ಲ ಸಂದರ್ಭಗಳಲ್ಲೂ ಹೆಣ್ಣುಮಕ್ಕಳು ಮಾಡುತ್ತಿರುವ ಆರೋಪಗಳಿಗೆ ತಲೆ ತಗ್ಗಿಸುವ ವಾತಾವರಣ ಉಂಟಾಗಿದೆ.

ತಮ್ಮ ಹೆಸರು ಹೊರಗೆ ಬರುತ್ತಿದ್ದಂತೆ ಬರಹಗಾರ ಚೇತನ್ ಭಗತ್ ತಮ್ಮ ಹೆಂಡತಿಯೊಂದಿಗೆ ಸಮಾಲೋಚನೆ ನಡೆಸಿ ತಕ್ಷಣ ತಪ್ಪೊಪ್ಪಿಗೆ ಪತ್ರವನ್ನು ತಮ್ಮ ಫೇಸ್‌ಬುಕ್‌ನಲ್ಲಿ ಪ್ರಕಟಿಸಿ 'ತಮ್ಮಿಂದ ಪ್ರಮಾದವಾಯಿತು' ಎಂದು ಬರೆದರು. ಹಾಡುಗಾರ ರಘು ದೀಕ್ಷಿತ್ ಸಹಾ ಹಾಗೇ ಪ್ರತಿಕ್ರಿಯಿಸಿದರು. ಕೆ.ಆರ್. ಶ್ರೀನಿವಾಸ್ ಎನ್ನುವ ಮಾಧ್ಯಮ ಸಂಪಾದಕ ತಮ್ಮನ್ನು ತಾವು ತನಿಖೆಗೆ ಒಡ್ಡಿಕೊಳ್ಳುವುದಾಗಿ ಹೇಳಿದರೂ ಸಾಕಷ್ಟು ಜನ ಅವರ ಅಶ್ಲೀಲ 'ಚಾಟ್'ಗಳ ಸ್ಕ್ರೀನ್ ಶಾಟ್ ಅನ್ನು ಹಂಚಿಕೊಂಡು ಅವರು ಕೆಲಸ ಮಾಡುತ್ತಿರುವ ಸಂಸ್ಥೆಗೆ ದೂರು ತಲುಪಿಸಿದ್ದಾರೆ. ಮುಂದಿನ ಪರಿಣಾಮ ಕಾದು ನೋಡಬೇಕಿದೆ.

ಸಿನಿಮಾ ನಿರ್ದೇಶಕ ರಜತ್ ಕಪೂರ್ ಅವರ ನಡವಳಿಕೆಯ ಬಗ್ಗೆ ಕೆಲವರು ಹೇಳಿಕೊಂಡರೆ ದೂರದರ್ಶನದ ಮೊದಲ ದಿನಗಳ 'ಹಂ ಲೋಗ್' ಧಾರಾವಾಹಿಯ ಮೂಲಕ ದೇಶದಾದ್ಯಂತ ಜನಪ್ರಿಯರಾದ ನಟ ಆಲೋಕ್‌ನಾಥ್

## ಯಾವ ರೀತಿಯ ದೌರ್ಜನ್ಯ?

❖ಅನುಚಿತ ಕರೆ/ಪ್ರಣಯಕ್ಕೆ ಆಹ್ವಾನ.

❖ಆಸಕ್ತಿ ಇಲ್ಲ ಎಂದು ಗೊತ್ತಾದಾಗಲೂ ಬಲವಂತ ಮಾಡುವುದು.

❖ಗುಪ್ತಾಂಗಗಳ ಫೋಟೋ ಕಳಿಸುವುದು.

❖ಇನ್ನೊಬ್ಬರ ನಗ್ನ ಫೋಟೋ ಕಳಿಸುವಂತೆ ಬಲವಂತ ಹೇರುವುದು.

❖ದೈಹಿಕ ಸಂಪರ್ಕಕ್ಕೆ ಬಲವಂತ ಮಾಡುವುದು, ಪದೇ ಪದೇ ಅನುಚಿತವಾಗಿ ಮುಟ್ಟುವುದು.

❖ಲೈಂಗಿಕ ಸಾಹಿತ್ಯ/ಸಿನಿಮಾಗಳನ್ನು ನೋಡುವಂತೆ ಹಂಚಿಕೊಳ್ಳುವಂತೆ, ಖಾಸಗಿ ವಿಷಯಗಳ ಬಗ್ಗೆ ಮಾತನಾಡುವಂತೆ ಒತ್ತಾಯಿಸುವುದು.

ಈ ಸ್ವರೂಪದ ನಡವಳಿಕೆಗಳು ಲೈಂಗಿಕ ದೌರ್ಜನ್ಯ ಎನ್ನಿಸಿಕೊಳ್ಳುತ್ತವೆ. ಇದರ ಜೊತೆಗೆ ಪ್ರತೀ ಸಂಸ್ಥೆಯೂ ಪಾಲಿಸಬೇಕಾದ ನಿಯಮ ಹಾಗೂ 'ಯಾವುದು ಲೈಂಗಿಕ ದೌರ್ಜನ್ಯ' ಎನ್ನುವ 'ವಿಶಾಖಾ ಸಮಿತಿ'ಯ ಗೈಡ್‌ಲೈನ್ಸ್ ಇವೆ.